**All India Radio: Bangalore**
**National Bulletins In Kannada**
**13.05.2025 / 1.10 pm**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**ಮುಖ್ಯಾಂಶಗಳು**

**೧. ನವದೆಹಲಿಯಲ್ಲಿಂದು ವಿವಿಧ ರಾಷ್ಟ್ರಗಳ ರಕ್ಷಣಾ ಸಂಯುಕ್ತಾಧಿಕಾರಿಗಳಿಗೆ ಆಪರೇಷನ್ ಸಿಂದೂರ ಕುರಿತಂತೆ ಭಾರತದಿಂದ ಮಾಹಿತಿ ಹಂಚಿಕೆ**

**೨. ಅಮೆರಿಕ ಉತ್ಪನ್ನಗಳ ಮೇಲೆ ವಿಧಿಸಿರುವ ಪ್ರತಿಸುಂಕಗಳ ಕುರಿತು ಡಬ್ಲ್ಯುಟಿಒಗೆ ಸೂಚಿಸಿದ ಭಾರತ**

**೩. ಸಿಬಿಎಸ್‌ಇ ಯಿಂದ ೨೦೨೪-೨೫ನೇ ಸಾಲಿನ ೧೨ನೇ ತರಗತಿ ಫಲಿತಾಂಶ ಪ್ರಕಟ - ಶೇಕಡ ೮೮.೩೯ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ**

**೪. ಜಮ್ಮು-ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಭದ್ರತಾಪಡೆಗಳು ಮತ್ತು ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ**

**<><*<><>*><>**

ಭಾರತ, ತನ್ನ ಇತ್ತೀಚಿನ ಭಯೋತ್ಪಾದಕ-ವಿರೋಧಿ ಸೇನಾ ಕಾರ್ಯಾಚರಣೆ 'ಆಪರೇಷನ್ ಸಿಂಧೂರ್' ಕುರಿತು ವಿವಿಧ ರಾಷ್ಟ್ರಗಳಿಂದ ನವದೆಹಲಿಯಲ್ಲಿ ನಿಯೋಜಿಸಲಾದ ರಕ್ಷಣಾ ಸಂಯುಕ್ತಾಧಿಕಾರಿಗಳಿಗೆ ಇಂದು ಮಧ್ಯಾಹ್ನ ೩:೩೦ಕ್ಕೆ ತಾಂತ್ರಿಕ ಸೇರಿದಂತೆ ಎಲ್ಲಾ ರೀತಿಯ ಮಾಹಿತಿ ನೀಡಲಿದೆ. ಭಾರತೀಯ ಸಶಸ್ತ್ರ ಪಡೆಗಳು ಮೇ ೭ ರಿಂದ ಮೇ ೧೦ ರವರೆಗೆ ನಡೆಸಿದ ವೈಮಾನಿಕ ದಾಳಿಗಳ ಫಲಿತಾಂಶ, ದೇಶೀಯ ಏರ್ ಡಿಫೆನ್ಸ್ ವ್ಯವಸ್ಥೆಗಳ ಸಾಧನೆ, ಸೇರಿದಂತೆ ವಿವಿಧ ತಾಂತ್ರಿಕ ಮಾಹಿತಿಗಳನ್ನು ಹಂಚಿಕೊಳ್ಳಲಿವೆ. ಕಾರ್ಯಾಚರಣೆಯಲ್ಲಿ ಚೀನಾ ಮತ್ತು ಟರ್ಕಿ ಮೂಲದ ಡ್ರೋನ್‌ಗಳು ಮತ್ತು ಪಿಎಲ್-೧೫ ಕ್ಷಿಪಣಿಗಳನ್ನು ಭಾರತೀಯ ವಾಯುಯಾನ ನಿರೋಧಕ ಪಡೆಗಳು ನಾಶಪಡಿಸಿದ್ದನ್ನು ಮತ್ತು ಭಾರತದ ವಾಯು ಪ್ರದೇಶಕ್ಕೆ ಯಾವುದೇ ಅತಿಕ್ರಮಣವಾಗದಂತೆ ತಡೆಯಲಾಗಿರುವ ಮಾಹಿತಿಗಳನ್ನು ಕೂಡ ಉಲ್ಲೇಖಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಇದೇ ವೇಳೆ ಭಾರತ-ಪಾಕಿಸ್ತಾನ ಡಿಜಿಎಂಒಗಳ ಮಧ್ಯೆ ಸೋಮವಾರ ಸಂಜೆ ೫ ಗಂಟೆಗೆ ನಡೆದ ಹಾಟ್‌ಲೈನ್ ಸಂವಾದದ ವಿವರಗಳು ಕೂಡ ಒಳಗೊಂಡಿರುತ್ತವೆ. ಭಾರತದಿಂದ ಲೆ.ಜೆನ್. ಘಾಯಿ ಮತ್ತು ಪಾಕಿಸ್ತಾನದಿಂದ ಮೇಜರ್ ಜನರಲ್ ಕಾಶಿಫ್ ಅಬ್ದುಲ್ಲಾ ಭಾಗವಹಿಸಿದ್ದ ಈ ಸಂವಾದದಲ್ಲಿ ಅಲ್ಲಿನ ಪರಿಸ್ಥಿತಿಯನ್ನು ಶಮನಗೊಳಿಸಲು ಕ್ರಮಗಳು, ಹಾಗೂ ಮೇ ೧೦ ರಂದು ಪಾಕಿಸ್ತಾನದ ವಿನಂತಿಗೆ ಅನುಗುಣವಾಗಿ ಕಾರ್ಯಾಚರಣೆ ಸ್ಥಗಿತಗೊಂಡ ನಂತರದ ಕದನ ವಿರಾಮ ಒಪ್ಪಂದದ ಬದ್ಧತೆಗಳ ಬಗ್ಗೆ ಚರ್ಚೆ ನಡೆದಿದೆ. ಈ ಬೆಳವಣಿಗೆಗೆ ಮುನ್ನ, ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕ ಲೇಫ್ಟಿನೆಂಟ್ ಜನರಲ್ ರಾಜೀವ್ ಘಾಯಿ ಮಾಧ್ಯಮಗಳಿಗೆ ನೀಡಿದ ಹೇಳಿಕೆಯಲ್ಲಿ, ಕಳೆದ ದಶಕದ ಕಾಲದಲ್ಲಿ ಪಡೆಗಳಿಗೆ ಲಭಿಸಿದ ಆಯವ್ಯಯ ಮತ್ತು ನೀತಿ ಬೆಂಬಲದಿಂದ ಸದೃಢ ರಕ್ಷಣಾ ಜಾಲವನ್ನು ನಿರ್ಮಿಸಲಾಗಿತ್ತು. ಮೇ ೯ ಮತ್ತು ೧೦ ರಂದು ಪಾಕಿಸ್ತಾನದ ಪ್ರತಿದಾಳಿ ವೇಳೆ ಈ ವ್ಯವಸ್ಥೆ ನಿರ್ಣಾಯಕ ಪಾತ್ರ ವಹಿಸಿತು ಎಂದು ಅವರು ಹೇಳಿದರು.

<><*<><>*><>

ಭಾರತೀಯ ಉಕ್ಕು ಮತ್ತು ಅಲ್ಯೂಮಿನಿಯಂ ರಫ್ತುಗಳ ಮೇಲೆ ಅಮೆರಿಕ ವಿಧಿಸಿರುವ ಸುಂಕಗಳಿಗೆ ಪ್ರತಿಯಾಗಿ, ಕೆಲವು ಅಮೆರಿಕ ಉತ್ಪನ್ನಗಳ ಮೇಲೆ ಪ್ರತಿಸುಂಕ ವಿಧಿಸಲು ತಾನು ಯೋಜನೆ ಹಾಕಿಕೊಂಡಿರುವುದಾಗಿ ಭಾರತ ವಿಶ್ವ ವ್ಯಾಪಾರ ಸಂಸ್ಥೆ ಡಬ್ಲ್ಯುಟಿಒಗೆ ಅಧಿಕೃತವಾಗಿ ತಿಳಿಸಿದೆ.

ಮೇ ೯ ರಂದು ಹೊರಬಿದ್ದ ಘಖಿಔ ಮಾಹಿತಿ ಪ್ರಕಾರ, ಅಮೆರಿಕದ ಕ್ರಮಗಳು ಭಾರತದಿಂದ ರಫ್ತುವಾಗುವ ಸುಮಾರು ೭.೬ ಶತಕೋಟಿ ಡಾಲರ್ ಮೌಲ್ಯದ ಉತ್ಪನ್ನಗಳ ಮೇಲೆ ಪರಿಣಾಮ ಬೀರುತ್ತಿವೆ, ಮತ್ತು ಇದರಿಂದ

ಸುಮಾರು ೧.೯೧ ಶತಕೋಟಿ ಡಾಲರ್ ತೆರಿಗೆ ಸಂಗ್ರಹವಾಗುವ ನಿರೀಕ್ಷೆಯಿದೆ. ಅಮೆರಿಕಾದ ಈ ತೆರಿಗೆಗಳು ಡಬ್ಲ್ಯೂಟಿಒ ನಿಯಮಗಳನ್ನು ಉಲ್ಲಂಘಿಸುತ್ತವೆ ಮತ್ತು ಅಮೆರಿಕ ಹೇಳಿಕೊಳ್ಳುತ್ತಿರುವಂತೆ ರಾಷ್ಟ್ರೀಯ ಭದ್ರತಾ ಕ್ರಮಗಳಾಗಿ ಪರಿಗಣಿಸಲು ಅನರ್ಹವೆಂದು ಭಾರತ ಅಭಿಪ್ರಾಯಪಟ್ಟಿದೆ. ಈ ನಡುವೆಯೇ, ಭಾರತ ಟ್ರಂಪ್ ಆಡಳಿತದೊಂದಿಗೆ ಹೊಸ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಅಂತಿಮ ಹಂತಕ್ಕೆ ಸಮೀಪಿಸುತ್ತಿದೆ.

<><*<><>*><>

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ - ಸಿಬಿಎಸ್‌ಇ ಈ ವರ್ಷದ ೧೨ನೇ ತರಗತಿಯ ಫಲಿತಾಂಶಗಳನ್ನು ಪ್ರಕಟಿಸಿದೆ. ಈ ಬಾರಿ ಶೇಕಡಾ ೮೮.೩೯ ರಷ್ಟು ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಇದು ಕಳೆದ ವರ್ಷದಿಗಿಂತ ಶೇಕಡಾ ೦.೪೧ ಉತ್ತಮ ಫಲಿತಾಂಶ ದಾಖಲಾಗಿದೆ.

ಈ ಬಾರಿಯೂ ಹೆಣ್ಣುಮಕ್ಕಳೇ ಗಂಡುಮಕ್ಕಳಿಗಿಂತ ಮೇಲುಗೈ ಸಾಧಿಸಿದ್ದಾರೆ. ಶೇಕಡಾ ೯೧ ರಷ್ಟು ಹೆಣ್ಣುಮಕ್ಕಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಅವರು ಗಂಡು ಮಕ್ಕಳನ್ನು ೫.೯೪ ಶೇಕಡಾ ಅಂಕಗಳಿಂದ ಹಿಂದಿಕ್ಕಿದ್ದಾರೆ.

ಈ ವರ್ಷ ಒಟ್ಟು ೧೬ ಲಕ್ಷ ೯೨ ಸಾವಿರ ೭೯೪ ವಿದ್ಯಾರ್ಥಿಗಳು ಅಃಖಇ ಪರೀಕ್ಷೆಗೆ ಹಾಜರಾಗಿದ್ದರು. ವಿದ್ಯಾರ್ಥಿಗಳು ತಮ್ಮ ಫಲಿತಾಂಶಗಳನ್ನು, cbse.gov.in, results.nic.in, results.digilocker.gov.in, umang.gov.in ಜಾಲತಾಣಗಳಲ್ಲಿ ಪರಿಶೀಲಿಸಬಹುದು.

<><*<><>*><>

ಜಮ್ಮು ಮತ್ತು ಕಾಶ್ಮೀರದ ಶೋಪಿಯನ್ ಜಿಲ್ಲೆಯ ಶುಕ್ರೂ ಕೆಲ್ಲರ್ ಅರಣ್ಯ ಪ್ರದೇಶದಲ್ಲಿ ಇಂದು ಬೆಳಿಗ್ಗೆ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆದಿದೆ ಎಂದು ಪೊಲೀಸ್ ಮೂಲಗಳು ದೃಢಪಡಿಸಿವೆ.

ಭಯೋತ್ಪಾದಕರು ಅರಣ್ಯದಲ್ಲಿ ಅಡಕೊಂಡಿರುವ ಸಾಧ್ಯತೆಯ ಮಾಹಿತಿ ಮೇರೆಗೆ, ಪೊಲೀಸ್, ಸೇನೆ ಮತ್ತು ಸಿಆರ್‌ಪಿಎಫ್ ಪಡೆಗಳು ಸ್ಥಳದಲ್ಲಿ ತೀವ್ರ ಜಂಟಿ ತಪಾಸಣಾ ಹಾಗೂ ಶೋಧನಾ ಕಾರ್ಯಾಚರಣೆ ಆರಂಭಿಸಿದ್ದವು. ಶಂಕಿತ ಸ್ಥಳವನ್ನು ಭದ್ರತಾ ಪಡೆಗಳು ಸಮೀಪಿಸುತ್ತಿದ್ದಂತೆ, ಅಡಗಿ ಕುಳಿತ ಭಯೋತ್ಪಾದಕರು, ಭದ್ರತಾ ಸಿಬ್ಬಂದಿಯ ಮೇಲೆ ಗುಂಡು ಹಾರಿಸಿದ ಪರಿಣಾಮವಾಗಿ ಗುಂಡಿನ ಚಕಮಕಿ ನಡೆದಿದೆ.

<><*<><>*><>

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಇಂದು ನಿವೃತ್ತರಾಗಲಿದ್ದು, ಸುಪ್ರೀಂ ಕೋರ್ಟ್‌ನ ೫೧ ನೇ ಮುಖ್ಯ ನ್ಯಾಯಮೂರ್ತಿಯಾಗಿ ಆರು ತಿಂಗಳ ಕಾಲ ಸೇವೆ ಸಲ್ಲಿಸಿದ ನಂತರ ಇಂದು ಅವರ ಅಧಿಕಾರಾವಧಿ ಕೊನೆಗೊಳ್ಳುತ್ತಿದೆ. ನ್ಯಾಯಮೂರ್ತಿ ಖನ್ನಾ ಅವರು ಸುಪ್ರೀಂ ಕೋರ್ಟ್‌ನ ಎರಡನೇ ಅತ್ಯಂತ ಹಿರಿಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ಔಪಚಾರಿಕವಾಗಿ ಶಿಫಾರಸು ಮಾಡಿದ್ದಾರೆ. ರಾಷ್ಟ್ರಪತಿಗಳ ಅಂಗೀಕಾರದ ಬಳಿಕ, ನ್ಯಾಯಮೂರ್ತಿ ಗವಾಯಿ ಅವರು ಭಾರತದ ೫೨ನೇ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ೨೦೧೯ರ ಮೇ ೨೪ರಂದು ಸುಪ್ರೀಂ ಕೋರ್ಟ್‌ಗೆ ಬಡ್ತಿ ಪಡೆದ ಗವಾಯಿ ಅವರು ೨೦೨೫ರ ನವೆಂಬರ್ ೨೩ರ ವರೆಗೆ ಸೇವೆ ನಿರ್ವಹಿಸಲಿದ್ದಾರೆ.

<><*<><>*><>

ಇತ್ತೀಚಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಪ್ರಯಾಣಿಕರ ಸುರಕ್ಷತೆಯನ್ನು ಪರಿಗಣಿಸಿ, ಜಮ್ಮು, ಲೇಹ್, ಜೋಧ್‌ಪುರ, ಅಮೃತಸರ, ಭುಜ್, ಜಾಮ್‌ನಗರ, ಚಂಡೀಗಢ ಮತ್ತು ರಾಜ್‌ಕೋಟ್‌ಗೆ ಹೋಗುವ ವಿಮಾನಗಳನ್ನು ಇಂದಿನವರೆಗೆ ರದ್ದುಗೊಳಿಸಲಾಗಿದೆ ಎಂದು ಏರ್ ಇಂಡಿಯಾ ತಿಳಿಸಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ, ಜನರು ವಿಮಾನಯಾನ ಸಂಪರ್ಕ ಕೇಂದ್ರಕ್ಕೆ ಕರೆ ಮಾಡಬಹುದು ಅಥವಾ ಅವರ ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

<><*<><>*><>

ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಜಮ್ಮುವಿನ ಗಡಿಯೇತರ ಜಿಲ್ಲೆಗಳು ಮತ್ತು ಕಾಶ್ಮೀರ ವಿಭಾಗಗಳಲ್ಲಿ ಇಂದಿನಿಂದ ಶಾಲೆಗಳು ಮತ್ತು ಕಾಲೇಜುಗಳನ್ನು ಪುನಃ ತೆರೆಯಲು ನಿರ್ಧರಿಸಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಶಿಕ್ಷಣ ಸಚಿವೆ ಸಕೀನಾ ಇಟೂ, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ಸುರಕ್ಷತೆಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಗಡಿ ಪ್ರದೇಶಗಳಲ್ಲಿನ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲಾಗಿದೆ ಎಂದು ತಿಳಿಸಿದ್ದಾರೆ.

<><*<><>*><>

ಆಪರೇಷನ್ ಸಿಂಧೂರ ಯಶಸ್ಸಿನ ನಂತರ ಬಿಜೆಪಿ ಇಂದಿನಿಂದ ದೇಶಾದ್ಯಂತ ೧೧ ದಿನಗಳ ಕಾಲ ತಿರಂಗ ಯಾತ್ರೆಯನ್ನು ಆಯೋಜಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ದೃಢನಿಶ್ಚಯದ ನಾಯಕತ್ವ ಮತ್ತು ಸಶಸ್ತ್ರ ಪಡೆಗಳ ಶೌರ್ಯದ ಬಗ್ಗೆ ಜನರಿಗೆ ತಿಳಿಸುವ ಭಾಗವಾಗಿ ಇದನ್ನು ಆಯೋಜಿಸಲಾಗಿದೆ. ಈ ತಿಂಗಳ ೨೩ ರವರೆಗೆ ನಡೆಯಲಿರುವ ಈ ಅಭಿಯಾನದಲ್ಲಿ ಮಾಜಿ ಸೈನಿಕರು ಮತ್ತು ಸಾಮಾಜಿಕ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಈ ಅಭಿಯಾನದ ಉದ್ದೇಶವು ರಾಜಕೀಯವಾಗಿರುವುದಿಲ್ಲ ಆದರೆ ಸಮಾಜದ ಎಲ್ಲಾ ವರ್ಗಗಳಿಂದ ಬೆಂಬಲವನ್ನು ಪಡೆದಿರುವ ವಿಷಯದ ಬಗ್ಗೆ ಜನರನ್ನು ಹುರಿದುಂಬಿಸುವ ಸಲುವಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

<><*<><>*><>

ಇಂಡಿಯನ್ ಪ್ರೀಮಿಯರ್ ಲೀಗ್ ೨೦೨೫ ರ ಉಳಿದ ಪಂದ್ಯಗಳು ಇದೇ ಶನಿವಾರ ೧೭ ರಿಂದ ಪುನರಾರಂಭವಾಗಲಿವೆ. ದೇಶದ ೬ ಕಡೆ ಉಳಿದ ೧೭ ಪಂದ್ಯಗಳನ್ನು ನಡೆಸಲಾಗುತ್ತದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಬಿಸಿಸಿಐ ತಿಳಿಸಿದೆ. ಮೇ ೨೯ ರಂದು ಕ್ವಾಲಿಫೈಯರ್ ಮೊದಲ ಪಂದ್ಯ ನಡೆಯಲಿದ್ದು, ಜೂನ್ ೩ ರಂದು ಅಂತಿಮ ಪಂದ್ಯ ನಡೆಯಲಿದೆ.

<><*<><>*><>